KADG220011392022

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ.**

**ಉಪಸ್ಥಿತರು**

**ಶ್ರೀಮತಿ. ಮಹಾಲಕ್ಷ್ಮೀ ಜಿ.**

**ಎಂ.ಎ., ಎಲ್.ಎಲ್.ಬಿ.,**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

**ದಿನಾಂಕಃ 2 ನೇ ಮೇ 2026 ರಂದು ಉಚ್ಚರಿಸಲ್ಪಟ್ಟಿತು.**

**ಅಪರಾಧಿಕ ಪ್ರಕರಣ ಸಂಖ್ಯೆ 581/2022**

**ಕರ್ನಾಟಕ ಸರ್ಕಾರದ ಪರವಾಗಿ ಚನ್ನಗಿರಿ ಪೊಲೀಸ್ ಠಾಣೆ**

**........ ಪಿರ್ಯಾದಿ**

**ವಿರುದ್ಧ**

1. **ಶ್ರೀನಿವಾಸ ಬಿ.**
   ತಂದೆಃ ಬನಪ್ಪ
   ವಯಸ್ಸುಃ 26 ವರ್ಷ,
   ಕೆಎ–17–ಟಿಸಿ–9146/47 ಟ್ರಾಕ್ಟರ್ ನ ಚಾಲಕ
   ವಾಸಃ ದೇವರಹಳ್ಳಿ
   ಚನ್ನಗಿರಿ ತಾಲ್ಲೂಕು
   ದಾವಣಗೆರೆ ಜಿಲ್ಲೆ

2. **ಮಹಮ್ಮದ್ ಗೌಸ್**
ತಂದೆಃ ಮಹಮ್ಮದ್ ಗಫರ್ ಸಾಬ್
ವಯಸ್ಸುಃ 47 ವರ್ಷ,
ವಾಸಃ ಲಷ್ಕರ್ ಮೊಹಲ್ಲಾ
ಚನ್ನಗಿರಿ ಟೌನ್ ಮತ್ತು ತಾಲ್ಲೂಕು
ದಾವಣಗೆರೆ ಜಿಲ್ಲೆ
**Pleaded guilty**

3. **ನೀಲಮ್ಮ**
ಗಂಡಃ ಲೋಕೇಶಪ್ಪ
ವಯಸ್ಸುಃ 51 ವರ್ಷ,
ವಾಸಃ ಬಿ ಆರ್ ಟಿ ಕಾಲೋನಿ
ಚನ್ನಗಿರಿ ತಾಲ್ಲೂಕು
ದಾವಣಗೆರೆ ಜಿಲ್ಲೆ
**Pleaded guilty**

........**ಆರೋಪಿತರು**

**1 ನೇ ಆರೋಪಿ ಪರ ಶ್ರೀ ಕೆ. ಜಿ. ಎಸ್ . ವಕೀಲರು**
**2 ಮತ್ತು 3 ನೇ ಆರೋಪಿತರು –Pleaded guilty**

1. ಅಪರಾಧ ಪ್ರಾರಂಭವಾದ ದಿನಾಂಕ : 05-08-2021
2. ಅಪರಾಧ ವರದಿಯಾದ ದಿನಾಂಕ : 05-08-2021
3. ಅಪರಾಧಿ ಬಂಧನಕಾರಿಯಾದ ದಿನಾಂಕ : ---
4. ದೂರುದಾರರ ಹೆಸರು :ಮೊಹಮ್ಮದ್ ಗೌಸ್
5. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ : 04-06-2024
6. ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ : 04.04.2026

7. ಅಪಾದನೆ ಕಲಂ : 1 ನೇ ಆರೋಪಿಯ ಮೇಲೆ
ಭಾ.ದಂ.ಸಂ.ಕಲಂ. 279, 337,304 ಎ
ಮತ್ತು ಭಾ.ಮೋ.ವಾ.ಕಾಯ್ದೆ ಕಲಂ
187 ಹಾಗೂ 2 ನೇ ಆರೋಪಿಯ ಮೇಲೆ
ಭಾ.ಮೋ.ವಾ.ಕಾಯ್ದೆ ಕಲಂ 181 ರ
ಅಡಿಯಲ್ಲಿ ,
3 ನೇ ಆರೋಪಿಯ ಮೇಲೆ
ಭಾ.ಮೋ.ವಾ.ಕಾಯ್ದೆ ಕಲಂ 196 ರ
ಅಡಿಯಲ್ಲಿ

8. ನ್ಯಾಯಾಧೀಶರ ಅಭಿಪ್ರಾಯ : ಭಾ.ದಂ.ಸಂ.ಕಲಂ. 279,
337,304 ಎ ಆಪಾದನೆಗಳಿಗೆ
1 ನೇ ಆರೋಪಿಯನ್ನು ನಿರ್ದೋಷಿ
ಎಂದು ಹಾಗೂ ಭಾ.ಮೋ.ವಾ.ಕಾಯ್ದೆ ಕಲಂ
187 ರ ಆಪಾದನೆಗೆ ದೋಷಿಯೆಂದು
ತೀರ್ಮಾನಿಸಿದೆ. 2 ಮತ್ತು 3 ನೇ ಆರೋಪಿತ ರ
ಮೇಲಿನ ಆಪಾದನೆಗಳಿಗೆ ದೋಷಿಯೆಂದು
ತೀರ್ಮಾನಿಸಿದೆ.

9. ರಾಜ್ಯ ಸರ್ಕಾರ : ಸ.ಸ.ಅ., ರವರಿಂದ

10. ಆರೋಪಿ ಪರ ವಕೀಲರು : **1 ನೇ ಆರೋಪಿ ಪರ ಶ್ರೀ ಕೆ. ಜಿ. ಎಸ್ .ವಕೀಲರು**
**2 ಮತ್ತು 3 ನೇ ಆರೋಪಿತರು –Pleaded guilty**

**(ಶ್ರೀಮತಿ. ಮಹಾಲಕ್ಷ್ಮೀ. ಜಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

**ತೀರ್ಪು**

ಚನ್ನಗಿರಿ ಪೋಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು 1 ನೇ ಆರೋಪಿಯ ಮೇಲೆ ಭಾರತೀಯ ದಂಡ ಸಂಹಿತೆ ಕಲಂ.279, 337, 304-ಎ ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 187 ಹಾಗೂ 2 ನೇ ಆರೋಪಿಯ ಮೇಲೆ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 181 ಹಾಗೂ 3 ನೇ ಆರೋಪಿಯ ಮೇಲೆ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 196 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರ.**

ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಲ್ಲೂರು ಗ್ರಾಮದ ಮುದಿಗೆರೆ ಕ್ರಾಸ್ ಹತ್ತಿರ ಚನ್ನಗಿರಿ-ದಾವಣಗೆರೆ ಎಸ್.ಹೆಚ್-76 ರಸ್ತೆಯಲ್ಲಿ ದಿನಾಂಕ: 05-08-2021 ರಂದು ಬೆಳಿಗ್ಗೆ, ಸುಮಾರು 9-00 ಗಂಟೆ ಸಮಯದಲ್ಲಿ 2 ನೇ ಆರೋಪಿಯು ಚಾಸಾ-8 ರವರಿಗೆ ಸಂಬಂದಿಸಿದ ಮೋಟರ್ ಬೈಕ್ ನಂ. ಕೆಎ-20-ಇಎ-1642 ನೇ ಬೈಕಿನಲ್ಲಿ, ಸಲೀಂ ಎಂಬಾತನನ್ನು ಹಿಂಬದಿ ಸವಾರನನ್ನಾಗಿ ಕೂರಿಸಿಕೊಂಡು ವಾಹನ ಚಾಲನಾ ಪರವಾನಿಗೆ ಇಲ್ಲದೆ ಚಾಲನೆ ಮಾಡಿಕೊಂಡು ನಲ್ಲೂರು ಗ್ರಾಮದ ಮುದಿಗೆರೆ ಕ್ರಾಸ್ ಹತ್ತಿರ ಚನ್ನಗಿರಿ-ದಾವಣಗೆರೆ ಎಸ್.ಹೆಚ್-76 ರಸ್ತೆಯಲ್ಲಿ ಹೋಗುತ್ತಿದ್ದಾಗ 3 ನೇ ಆರೋಪಿಯ ಮಾಲಿಕತ್ವದ ವಿಮೆ ಇಲ್ಲದ ಟ್ರಾಕ್ಟರ್ ಕೆಎ 17-ಟಿಸಿ-9416 ಮತ್ತು ಟ್ರೇಲರ್ ಕೆಎ-17-ಟಿಸಿ-9417 ವಾಹನವನ್ನು

1 ನೇ ಆರೋಪಿಗೆ ಚಾಲನೆ ಮಾಡಲು ಕೊಟ್ಟಿದ್ದು, 1 ನೇ ಆರೋಪಿಯು ನಲ್ಲೂರು ಗ್ರಾಮದ ಮುದಿಗೆರೆ ಕ್ರಾಸ್ ಹತ್ತಿರ ಚನ್ನಗಿರಿ–ದಾವಣಗೆರೆ ಎಸ್.ಹೆಚ್–76 ರಸ್ತೆಯಲ್ಲಿ, ಟ್ರಾಕ್ಟರ್ ಕೆಎ 17–ಟಿಸಿ–9416 ಮತ್ತು ಟ್ರೇಲರ್ ಕೆಎ–17–ಟಿಸಿ–9417 ನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದರಿಂದ ಚಾಲಕನ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ 2 ನೇ ಆರೋಪಿಯು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಬೈಕಿಗೆ ಹಿಂಬದಿಯಿಂದ ಡಿಕ್ಕಿ ಪಡಿಸಿದ ಪರಿಣಾಮ ಸಲೀಂ ನ ತಲೆಗೆ, ಕೈ ಕಾಲುಗಳಿಗೆ ಹೊಡೆತ ಬಿದ್ದು ರಕ್ತ ಸ್ರಾವವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು 2 ನೇ ಆರೋಪಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, 1 ನೇ ಆರೋಪಿಯು ಅಪಘಾತದ ಪಡಿಸಿದ ಟ್ರಾಕ್ಟರ್ ಮತ್ತು ಟ್ರೈಲರ್ ನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ ಎಂಬುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

3. ಘಟನೆಯ ತರುವಾಯ ಚಾಸಾ–1 ರವರು ನೀಡಿದ ದೂರಿನ ಅನ್ವಯ ಚಾಸಾ.19 ರವರು ಚನ್ನಗಿರಿ ಪೋಲಿಸ್ ಠಾಣಾ ಗುನ್ನಾ ಸಂಃ 276/2021 ರ ಅಡಿಯಲ್ಲಿ, ಭಾರತೀಯ ದಂಡ ಸಂಹಿತೆ ಕಲಂ.279, 337, 304–ಎ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ಚಾಸಾ–20 ರವರು ಸ್ಥಳ ಪರಿಶೀಲನೆ ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಕಲೆ ಹಾಕಿ 1 ನೇ ಆರೋಪಿಯ ಮೇಲೆ ಭಾರತೀಯ ದಂಡ ಸಂಹಿತೆ ಕಲಂ.279, 337, 304–ಎ ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 187 ಹಾಗೂ 2 ನೇ ಆರೋಪಿಯ ಮೇಲೆ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 181 ಹಾಗೂ 3 ನೇ

ಆರೋಪಿಯ ಮೇಲೆ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 196 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನೆಸಗಿರುತ್ತಾರೆಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

4. ಆರೋಪಿತರಿಗೆ ಸಮನ್ಸನ್ನು ಹೊರಡಿಸಿ ಹಾಜರಾತಿಯನ್ನು ಪಡೆಯಲಾಗಿದ್ದು, ಸದರಿಯವರು ಜಾಮೀನನ್ನು ಪಡೆದು ವಿಚಾರಣೆಗೊಳಪಟ್ಟಿರುತ್ತಾರೆ. ತದನಂತರ ಆರೋಪಿತರ ಅಹವಾಲನ್ನು ಆಲಿಸಿ, ದೋಷಾರೋಪಣೆಗಳನ್ನು ರಚಿಸಿ, ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ.

5. ದಿನಾಂಕ 25-11-2022 ರಂದು 2 ನೇ ಆರೋಪಿ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 181 ಅಡಿಯಲ್ಲಿನ ತನ್ನ ಅಪರಾಧವನ್ನು ಒಪ್ಪಿಕೊಂಡು ಅದೇ ದಿನ ರೂ.2,500/- ಗಳ ದಂಡವನ್ನು ಪಾವತಿಸುವ ಮೂಲಕ ಶಿಕ್ಷೆಯನ್ನು ಅನುಭವಿಸಿರುತ್ತಾರೆ. ದಿನಾಂಕ 23-05-2023 ರಂದು 3 ನೇ ಆರೋಪಿ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 196 ರ ಅಡಿಯಲ್ಲಿನ ತನ್ನ ಅಪರಾಧವನ್ನು ಒಪ್ಪಿಕೊಂಡು ಅದೇ ದಿನ ರೂ.2,000/- ಗಳ ದಂಡವನ್ನು ಪಾವತಿಸುವ ಮೂಲಕ ಶಿಕ್ಷೆಯನ್ನು ಅನುಭವಿಸಿರುತ್ತಾರೆ .

6. 1 ನೇ ಆರೋಪಿ ತನ್ನ ಮೇಲೆ ಆಪಾದಿಸಿದ ಆಪಾದನೆಗಳನ್ನು ಅಲ್ಲಗಳೆದು ವಿಚಾರಣೆಗೊಳಪಡಿಸುವಂತೆ ಕೋರಿದ ಮೇರೆಗೆ ಅಭಿಯೋಜನೆಯ ಸಾಕ್ಷ್ಯಗಳನ್ನು ವಿಚಾರಣೆಗೊಳಪಡಿಸಲಾಗಿರುತ್ತದೆ.

7. ಅಂತಿಮ ವರದಿಯಲ್ಲಿ ತೋರಿಸಿದ ಒಟ್ಟು 20 ಸಾಕ್ಷಿದಾರರ ಪೈಕಿ 7 ಸಾಕ್ಷಿದಾರರನ್ನು ಪ್ರಾಸಾ.1 ರಿಂದ ಪ್ರಾಸಾ.7 ರಂತೆ ಅಭಿಯೋಜನೆಯವರು ವಿಚಾರಣೆಗೊಳಪಡಿಸಿರುತ್ತಾರೆ. ಅಲ್ಲದೇ ನಿಪಿ.1 ರಿಂದ 24 ರಂತೆ ದಾಖಲಾತಿ ಸಾಕ್ಷ್ಯಗಳು ಕೂಡ ನಿಶಾನೆಗೊಳಪಟ್ಟಿರುತ್ತವೆ.

8. ಅಭಿಯೋಜನೆಯ ಸಾಕ್ಷ್ಯದ ವಿಚಾರಣೆಯ ಬಳಿಕ, ಅವುಗಳಲ್ಲಿ ಆರೋಪಿತರ ಮೇಲಿನ ಅಪರಾಧವನ್ನು ಸೂಚಿಸುವ ಸಾಕ್ಷ್ಯಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ತಯಾರಿಸಿ, ಓದಿ ಹೇಳಲಾಯಿತು. ಅವುಗಳನ್ನು ಅಲ್ಲಗಳೆದ ಆರೋಪಿತರು ತಮ್ಮ ಪರವಾಗಿ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯ ವಿಚಾರಣೆ ಇಲ್ಲವೆಂದು ತಿಳಿಸಿರುತ್ತಾರೆ.

9. ಮಾನ್ಯ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ಅಂತಿಮ ವಾದವನ್ನು ಆಲಿಸಲಾಯಿತು. ದಾಖಲಾತಿಗಳನ್ನು ಪರಿಶೀಲಿಸಲಾಯಿತು.

10. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

**<u>ಅಂಶಗಳು</u>**

1.ಮೊದಲನೇಯದಾಗಿ ದಿನಾಂಕ: 05.08.2021 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ದೇವರಹಳ್ಳಿ ಗ್ರಾಮದ ಚನ್ನಗಿರಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನಲ್ಲೂರು ಗ್ರಾಮದ ಮುದಿಗೆರೆ ಕ್ರಾಸ್ ಹತ್ತಿರ ಚನ್ನಗಿರಿ – ದಾವಣಗೆರೆ ಎಸ್.ಹೆಚ್.76 ರ ಸಾರ್ವಜನಿಕ ರಸ್ತೆಯಲ್ಲಿ 1 ನೇ ಆರೋಪಿ ಕೆಎ–17–ಟಿಸಿ–9416 ಟ್ರ್ಯಾಕ್ಟರ್ ಮತ್ತು ಟ್ರೈಲರ್ ಕೆಎ–17–ಟಿಸಿ–9417 ಅನ್ನು ಅತೀವೇಗ ಮತ್ತು

ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಭಾ.ದಂ.ಸಂ. ಕಲಂ 279 ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿ ಕೆಎ-17-ಟಿಸಿ-9416 ಟ್ರ್ಯಾಕ್ಟರ್ ಮತ್ತು ಟ್ರೈಲರ್ ಕೆಎ-17-ಟಿಸಿ- 9417 ಅನ್ನು ಅತೀವೇಗ ಮತ್ತು ಆಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ 2 ನೇ ಆರೋಪಿ ಚಲಾಯಿಸುತ್ತಿದ್ದ ಕೆಎ-20-ಇಎ-1642 ನೇ ಬೈಕಿಗೆ ಅಪಘಾತ ಪಡಿಸಿದ್ದರಿಂದ 2 ನೇ ಆರೋಪಿಗೆ ಪೆಟ್ಟುಬಿದ್ದು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದರಿಂದ ಭಾರತ ದಂಡ ಸಂಹಿತೆ ಕಲಂ 337 ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿ ಕೆಎ-17-ಟಿಸಿ-9416 ಟ್ರ್ಯಾಕ್ಟರ್ ಮತ್ತು ಟ್ರೈಲರ್ ಕೆಎ-17-ಟಿಸಿ- 9417 ಅನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ 2 ನೇ ಆರೋಪಿ ಚಲಾಯಿಸುತ್ತಿದ್ದ ಕೆಎ-20-ಇಎ-1642 ನೇ ಬೈಕಿಗೆ ಅಪಘಾತ ಪಡಿಸಿದ್ದರಿಂದ ಸಲೀಂ ಎಂಬುವವರಿಗೆ ತಲೆಗೆ ಹೊಡೆತ ಕೈ ಕಾಲುಗಳಿಗೆ ಹೊಡೆತ ಬಿದ್ದು ರಕ್ತ ಸ್ರಾವವಾಗಿ ಸ್ಥಳದಲ್ಲಿಯೇ ಮೃತಪಡಲು ಕಾರಣನಾಗಿ ಭಾರತ ದಂಡ ಸಂಹಿತೆ ಕಲಂ 304 (ಎ) ರ

ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

4. ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ನೇ ಆರೋಪಿ ಸದರಿ ಮೇಲ್ಕಂಡ ವಾಹನದಿಂದ ಅಪಘಾತ ಪಡಿಸಿದರು ಯಾರಿಗೂ ತಿಳಿಸದೇ ಓಡಿ ಹೋಗಿರುವುದರಿಂದ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿ ದಂಡನೀಯ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸಿದ್ದಾರೆಯೇ?

5. ಆದೇಶ ಏನು?

11. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

| | |
|---|---|
| ಅಂಶ ಸಂಖ್ಯೆ 1 ರಿಂದ 3 | : ನಕಾರಾತ್ಮಕವಾಗಿ, |
| ಅಂಶ ಸಂಖ್ಯೆ 4 | : ಸಕಾರಾತ್ಮಕವಾಗಿ, |
| ಅಂಶ ಸಂಖ್ಯೆ 5 | : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## ಕಾರಣಗಳು

12. **ಅಂಶ ಸಂಖ್ಯೆ 1 ರಿಂದ 4 :-** ಈ ನಾಲ್ಕು ಅಂಶಗಳು ಒಂದೇ ಘಟನೆಗೆ ಸಂಬಂಧಿಸಿದ್ದರಿಂದ, ಸಂಗತಿಗಳ ಮತ್ತು ಸಾಕ್ಷ್ಯಗಳ ಹಾಗೂ ಅವುಗಳಿಗೆ ನೀಡಲಾಗುವ ಕಾರಣಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ, ಸದರಿ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ಈ ಮೇಲಿನ ಆರೋಪಿತರ ಮೇಲೆ ಹೊರಿಸಲಾದ ದೋಷಾರೋಪಣೆಯಲ್ಲಿನ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ರ ಅಡಿ ರುಜುವಾತಿನ ಹೊಣೆಯನ್ನು ಹೊಂದಿರುತ್ತದೆ.

14. ಪ್ರಸ್ತುತ ಪ್ರಕರಣದಲ್ಲಿ 1 ನೇ ಆರೋಪಿಯ ಮೇಲೆ ಆಪಾದಿಸಲಾಗಿರುವ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ದೋಷಾರೋಪಣ ಪಟ್ಟಿಯಲ್ಲಿ ತೋರಿಸಿದ ಒಟ್ಟು 20 ಸಾಕ್ಷಿದಾರರ ಪೈಕಿ 7 ಸಾಕ್ಷಿದಾರರನ್ನು ಫ್ರಾಸಾ.1 ರಿಂದ 7 ರಂತೆ ವಿಚಾರಣೆಗೆ ಒಳಪಡಿಸಿದ್ದು, ಅದರಲ್ಲಿ ದೂರುದಾರರಾದ ಚಾಸಾ.1 ಮೊಹಮ್ಮದ್ ಗೌಸ್ ರವರನ್ನು ಫ್ರಾಸಾ.7 ರಂತೆ, ಪ್ರತ್ಯಕ್ಷದರ್ಶಿ ಸಾಕ್ಷಿದಾರರಾದ ಚಾಸಾ.14 ಸೈಯದ್ ಮುಸ್ತಫಾ , ಚಾಸಾ.15 ಇರ್ಫಾನ್ ಖಾನ್, ಚಾಸಾ.16 ಸಲ್ಮಾನ್ ಖಾನ್ ರವರನ್ನು ಕ್ರಮವಾಗಿ ಫ್ರಾಸಾ. 2, ಫ್ರಾಸಾ. 5, ಫ್ರಾಸಾ.6 ರಂತೆ ಹಾಗೂ ಮಹಜರ್ ಸಾಕ್ಷಿದಾರರಾದ ಚಾಸಾ.10 ಸಿದ್ದಪ್ಪ ರವರನ್ನು ಫ್ರಾಸಾ.1 ರಂತೆ, ಪ್ರಸ್ತುತ ಪ್ರಕರಣದ ತನಿಖಾಕಾರಿಗಳಾದ ಚಾಸಾ.19 ವೀರಪ್ಪ ಎಸ್ .ಆರ್ ಮತ್ತು ಚಾಸಾ.20 ಮಧು ಪಿ. ಬಿ ರವರನ್ನು ಕ್ರಮವಾಗಿ ಫ್ರಾಸಾ.4 ಮತ್ತು ಫ್ರಾಸಾ.3 ರಂತೆ ವಿಚಾರಣೆಗೆ ಒಳಪಡಿಸಿರುತ್ತದೆ.

15. ಅಲ್ಲದೆ, ಮೇಲಿನ ಮೌಖಿಕ ಸಾಕ್ಷ್ಯಗಳಿಗೆ ಪೂರಕವಾಗಿ ಒಟ್ಟು 24 ದಾಖಲೆಗಳನ್ನು ನಿಪಿ.1 ರಿಂದ 24 ರಂತೆ ನಿಶಾನೆಗೊಳಪಡಿಸಿಕೊಂಡಿರುತ್ತದೆ. ಒಪ್ಪಿಗೆ ಮೇರೆಗೆ ನಿಶಾನೆಗೊಳಪಟ್ಟ ನಿಪಿ.1/ಶವ ತನಿಖಾ ವರದಿ, ನಿಪಿ.1(ಎ)/ಸಹಿ, ಒಪ್ಪಿಗೆ

ಮೇರೆಗೆ ನಿಶಾನೆಗೊಳಪಟ್ಟ ನಿಪಿ.2/ಗಾಯದ ಪ್ರಮಾಣ ಪತ್ರ, ನಿಪಿ.2(ಎ)/ಸಹಿ, ಒಪ್ಪಿಗೆ ಮೇರೆಗೆ ನಿಶಾನೆಗೊಳಪಟ್ಟ ನಿಪಿ.3/ ಐ ಎಂ ವಿ ವರದಿ, ನಿಪಿ.3(ಎ)/ಸಹಿ, ಒಪ್ಪಿಗೆ ಮೇರೆಗೆ ನಿಶಾನೆಗೊಳಪಟ್ಟ ನಿಪಿ.4/ಶವ ಪರೀಕ್ಷಾ ವರದಿ, ನಿಪಿ.4(ಎ)ಮತ್ತು (ಬಿ)/ಸಹಿಗಳು, ನಿಪಿ.5/ವಾಹನ ಬಿಡುಗಡೆ ಪಂಚನಾಮೆ, ನಿಪಿ.5(ಎ) ಮತ್ತು (ಬಿ)/ಸಹಿಗಳು, ನಿಪಿ.6/ಚಾಸಾ-14 ರವರ ಅಲ್ಲಗಳೆದ ಹೇಳಿಕೆ, ನಿಪಿ.7, 9, 12 ಮತ್ತು 14/ಭಾವಚಿತ್ರಗಳು, ನಿಪಿ.8/ ಕೃತ್ಯ ನಡೆದ ಸ್ಥಳದ ಪಂಚನಾಮೆ, ನಿಪಿ.10/ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ, ನಿಪಿ.10(ಎ) /ಸಹಿ, ನಿಪಿ.11/ಟ್ರಾಕ್ಟರ್ ಮತ್ತು ಟ್ರೇಲರ್ ಅಮಾನತ್ತು ಪಂಚನಾಮೆ, ನಿಪಿ.11(ಎ)/ಸಹಿ, ನಿಪಿ.13/ ಬೈಕಿನ ಅಮಾನತ್ತು ಪಂಚನಾಮೆ, ನಿಪಿ.13(ಎ) /ಸಹಿ, ನಿಪಿ.15/ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ಅಡಿ ಪ್ರಮಾಣ ಪತ್ರ, ನಿಪಿ.15(ಎ)/ಸಹಿ, ನಿಪಿ.16/ವಾಹನದ ಮಾಲೀಕರಿಗೆ ನೀಡಿದ ನೋಟೀಸು, ನಿಪಿ.16(ಎ)/ಸಹಿ, ನಿಪಿ.17 ಮತ್ತು 18/1 ಮತ್ತು 3 ನೇ ಆರೋಪಿತರು ನೋಟೀಸಿಗೆ ನೀಡಿದ ಉತ್ತರಗಳು, ನಿಪಿ.17(ಎ) ಮತ್ತು 18(ಎ)/ಸಹಿಗಳು, ನಿಪಿ.19/ಜಿ.ಪಿ.ಎ,ನಿಪಿ.20/ ಇಂಡೆಮ್ನಿಟಿ ಬಾಂಡ್, ನಿಪಿ.20(ಎ)/ಸಹಿ, ನಿಪಿ.21/ ಹೇಳಿಕೆ ದೂರು, ನಿಪಿ.21(ಎ)/ಸಹಿ, ನಿಪಿ.22/ಪ್ರ.ವ.ವರದಿ, ನಿಪಿ.22(ಎ)/ಸಹಿ, ನಿಪಿ.23/ಚಾಸಾ.15 ಮತ್ತು16 ರವರ ಅಲ್ಲಗಳೆದ ಹೇಳಿಕೆಗಳಾಗಿವೆ .

16. ಪ್ರಸ್ತುತ ಪ್ರಕರಣದಲ್ಲಿ ಆರೋಪಿತರ ಮೇಲೆ ಆರೋಪಿಸಿರುವ ಆರೋಪಗಳನ್ನು ರುಜುವಾತುಪಡಿಸಲು ಪಡಿಸಲು 2 ನೇ ಆರೋಪಿಯ ಮೇಲೆ

ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 181ರ ಅಡಿ ಹಾಗೂ 3 ನೇ ಆರೋಪಿಯ ಮೇಲೆ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 196ರ ಅಡಿಯಲ್ಲಿ ಆಪಾದಿಸಿದ್ದು, ಸದರಿಯವರು ಸದರಿ ಆಪಾದನೆಗಳಿಗೆ ನ್ಯಾಯಾಲಯಕ್ಕೆ ಹಾಜರಾಗಿ, ದಿನಾಂಕ 25-11-2022 ಮತ್ತು 23-05-2023 ರಂದು ತಪ್ಪೊಪ್ಪಿಕೊಂಡ ಮೇರೆಗೆ, ಸದರಿಯವರಿಗೆ ಸದರಿ ದಿನಾಂಕಗಳಂದೆ ನ್ಯಾಯಾಲಯ ತಪ್ಪಿತಸ್ಥರನ್ನಾಗಿ ನಿರ್ಧರಿಸಿ ಶಿಕ್ಷೆ ವಿಧಿಸಿರುತ್ತದೆ.

17. ಪ್ರಸ್ತುತ ಪ್ರಕರಣದಲ್ಲಿ 1 ನೇ ಆರೋಪಿಯ ಮೇಲೆ ಆರೋಪಿಸಿದ ಆರೋಪಗಳಾದ ಭಾರತೀಯ ದಂಡ ಸಂಹಿತೆ ಕಲಂ. 279, 134, 304-A ಹಾಗೂ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿನ ಆಪಾದನೆಗಳನ್ನು ರುಜುವಾತುಪಡಿಸಲು ಮೊಟ್ಟ ಮೊದಲಿಗೆ ದೂರುದಾರರಾದ ಚಾಸಾ.1 ಮೊಹಮ್ಮದ್ ಗೌಸ್ ರವರ ಮೌಖಿಕ ಸಾಕ್ಷ್ಯ ಹಾಗೂ ಸದರಿಯವರು ದಾಖಲಿಸಿದ ದೂರನ್ನು ಪರಿಶೀಲಿಸುವುದು ಅತ್ಯಗತ್ಯವಾಗಿದೆ. ಅದರಂತೆ ಸದರಿಯವರನ್ನು ಅಭಿಯೋಜನೆಯು ಫ್ರಾಸಾ.7 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಾರು 4-5 ವರ್ಷಗಳ ಹಿಂದೆ ತಾನು ಬೈಕಿನಲ್ಲಿ ನಲ್ಲೂರಿಗೆ ಹೋಗುತ್ತಿದ್ದಾಗ ಟ್ರಾಕ್ಟರ್ ಹಿಂಬದಿಯಿಂದ ಬಂದು ತನ್ನ ಬೈಕಿಗೆ ಡಿಕ್ಕಿಪಡಿಸಿರುವುದಾಗಿ, ಆದ ಕಾರಣ ಹಿಂಬದಿಯಲ್ಲಿ ಕುಳಿತಿದ್ದ ಸಲೀಂನಿಗೆ ಅಪಘಾತದಲ್ಲಿ ತೀವ್ರತರವಾದ ಪೆಟ್ಟುಗಳಾಗಿ ಮೃತಪಟ್ಟಿದ್ದು, ತನಗೂ ಸಹ ಪೆಟ್ಟು ಬಿದ್ದಿರುವುದಾಗಿ ಮತ್ತು ತಾವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ, ಸದರಿ ವಿಚಾರದ ಕುರಿತು ಸದರಿ

ಟ್ರ್ಯಾಕ್ಟರ್‌ನ ಚಾಲಕನಾದ ಆರೋಪಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನಿಪಿ. 21 ರಂತೆ ನಿಶಾನೆಗೊಳಗಾದ ಹೇಳಿಕೆ ದೂರನ್ನು ದಾಖಲಿಸಿರುವುದಾಗಿ, ಸದರಿ ಬೈಕಿನ ಸಂಖ್ಯೆಯನ್ನಾಗಲೀ ಅಥವಾ ಅಪಘಾತಪಡಿಸಿದ ಟ್ರ್ಯಾಕ್ಟರ್ ಸಂಖ್ಯೆಯನ್ನಾಗಲಿ ಅಥವಾ ಅದರ ಚಾಲಕನ ವಿವರಗಳಾಗಲೀ ತನಗೆ ಹೇಳಲಾಗುವುದಿಲ್ಲವೆಂದು, ನಿಪಿ.8 ರಂತೆ ನಿಶಾನೆಗೊಳಗಾದ ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ, ಅದನ್ನು ಯಾರು, ಎಲ್ಲಿ, ಯಾವಾಗ ಯಾವ ಕಾರಣಕ್ಕಾಗಿ ಬರೆದರು ಎಂದು ಗೊತ್ತಿಲ್ಲ, ನಿಪಿ.9 ರಂತೆ ನಿಶಾನೆಗೊಳಗಾದ ಭಾವಚಿತ್ರದಲ್ಲಿ ತಾನು ಇರುವುದಾಗಿ, ಸದರಿ ಭಾವಚಿತ್ರಕ್ಕೆ ತಾನು ಪೊಲೀಸರ ಕೋರಿಕೆಯ ಮೇರೆಗೆ ನಿಂತಿರುವುದಾಗಿ, ಅದನ್ನು ಯಾರು, ಯಾವಾಗ, ಯಾವ ಕಾರಣಕ್ಕಾಗಿ ತೆಗೆದರು ಎಂದು ಗೊತ್ತಿಲ್ಲ, ನಿಪಿ.8 ರಂತೆ ನಿಶಾನೆಗೊಳಗಾದ ದಾಖಲೆಯಲ್ಲಿ ತನ್ನ ಸಹಿ ಇರುವುದಾಗಿ. ಸದರಿ ದಾಖಲೆ ಯಾವುದು ಎಂದು ತನಗೆ ಗೊತ್ತಿಲ್ಲ, ನಿಪಿ. 20 ರಂತೆ ನಿಶಾನೆಗೊಳಗಾದ ಇಂಡೆಮ್ನಿಟಿ ಬಾಂಡ್ ನಲ್ಲಿ ತನ್ನ ಸಹಿ ಇರುವುದಾಗಿ, ಸದರಿ ದಾಖಲೆಯಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ. ಆರೋಪಿಯನ್ನು ತಾನು ನೋಡಿಲ್ಲ ಮತ್ತು ಅಪಘಾತ ಪಡಿಸಿದ ವಾಹನವನ್ನು ಗುರುತಿಸಲಾಗುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ, ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

18. ಸದರಿ ಸಾಕ್ಷಿಯನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ

ಪಾಟೀ ಸವಾಲಿಗೆ ಒಳಪಡಿಸಿದಾಗ, 1 ನೇ ಆರೋಪಿಯ ಮೇಲೆ ಆರೋಪಿಸಿದ ಆರೋಪಗಳು ದೃಢಪಡುವಂತಹ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಾಕ್ಷಿ ಸಾರಾಸಗಟಾಗಿ ಅಲ್ಲಗಳೆದಿರುತ್ತಾರೆ. ನಿಪಿ.20 ರಂತೆ ನಿಶಾನೆಗೊಳಗಾದ ಇಂಡೆಮ್ನಿಟಿ ಬಾಂಡ್ ಅನ್ನು ಹಾಜರುಪಡಿಸಿ, ಬೈಕನ್ನು ತನ್ನ ವಶಕ್ಕೆ ಪಡೆದಿರುವುದಾಗಿ ಹಾಗೂ ನಿಪಿ. 21 ರಂತೆ ನಿಶಾನೆಗೊಳಗಾದ ಹೇಳಿಕೆ ದೂರನ್ನು ಆರೋಪಿಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ದಾಖಲಿಸಿರುವ ಸೂಚನೆಯನ್ನು ಒಪ್ಪಿರುತ್ತಾರೆ.

19. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿ ಅಪಘಾತ ಯಾವ ಕಾರಣದಿಂದ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ತನಗೆ ಮಾಹಿತಿ ಇಲ್ಲ ಎಂಬ ಸೂಚನೆಯನ್ನು ಒಪ್ಪಿರುತ್ತಾರೆ.

20. ಪ್ರಸ್ತುತ ಪ್ರಕರಣದಲ್ಲಿ ದೂರುದಾರರಾದ ಚಾಸಾ.1 ರವರು ತಾನು ಹೇಳಿದ ದೂರು ಹಾಗೂ ಸ್ಥಳ ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನೀಡಿದ ಕಾರಣ, ಸದರಿಯವರ ಸಾಕ್ಷ್ಯದಿಂದ 1 ನೇ ಆರೋಪಿಯ ಮೇಲೆ ಆರೋಪಿಸಿದ ಆರೋಪಗಳ ಮೇಲೆ ಯಾವುದೇ ಸ್ಪಷ್ಟ ಅಭಿಪ್ರಾಯಕ್ಕೆ ಬರುವುದು ಅಸಾಧ್ಯವಾಗಿದೆ.

21. ಹಾಗಾಗಿ, ಪ್ರಸ್ತುತ ಪ್ರಕರಣದ ಪ್ರತ್ಯಕ್ಷದರ್ಶಿ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸುವುದು ಅತ್ಯಗತ್ಯವಾಗಿದೆ. ಅದರಂತೆ, ಪ್ರಸ್ತುತ ಪ್ರಕರಣದ ಪ್ರತ್ಯಕ್ಷದರ್ಶಿ ಸಾಕ್ಷಿದಾರರು ಎನ್ನಲಾದ ಚಾಸಾ.14 ಸೈಯದ್ ಮುಸ್ತಫಾರವರನ್ನು ಅಭಿಯೋಜನೆಯು ಫ್ರಾಸಾ.2 ರಂತೆ ಹಾಗೂ ಚಾಸಾ.15 ಇರ್ಫಾನ್ ಖಾನ್ ರವರನ್ನು ಫ್ರಾಸಾ.5 ರಂತೆ ಹಾಗೂ ಚಾಸಾ.16 ಸಲ್ಮಾನ್ ಖಾನ್ ರವರನ್ನು ಫ್ರಾಸಾ.6 ರಂತೆ

ವಿಚಾರಣೆಗೆ ಒಳಪಡಿಸಿದ್ದು , ಸದರಿಯವರು ತಮ್ಮ ಮುಖ್ಯ ವಿಚಾರಣೆಗಳಲ್ಲಿ ಪ್ರಸ್ತುತ ಪ್ರಕರಣದ ಕುರಿತು ತಮಗೆ ಯಾವುದೇ ಮಾಹಿತಿ ಇಲ್ಲ, ತಾವು ಯಾವುದೇ ಅಪಘಾತವನ್ನು ನೋಡಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕಗಳನ್ನು ನೀಡಿಲ್ಲ, ಆರೋಪಿತರನ್ನು ತಾವು ನೋಡಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿ ಮತ್ತು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ.

22. ಸದರಿ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲಿಗೆ ಒಳಪಡಿಸಿದಾಗ ಅಭಿಯೋಜಕರು 1 ನೇ ಆರೋಪಿಯ ಮೇಲೆ ಆರೋಪಿಸಿದ ಆಪಾದನೆಗಳು ದೃಢಪಡಿಸುವಂತಹ ಎಲ್ಲಾ ಸೂಚನೆಗಳನ್ನು ಸಾಕ್ಷಿದಾರರು ಕ್ರಮವಾಗಿ ಅಲ್ಲಗಳೆದಿರುತ್ತಾರೆ. ಸದರಿಯವರ ಅಲ್ಲಗಳೆದ ಹೇಳಿಕೆಗಳನ್ನು ಕ್ರಮವಾಗಿ ನಿಪಿ.6, ನಿಪಿ.23 ಹಾಗೂ ನಿಪಿ.24 ರಂತೆ ನಿಶಾನೆಗೊಳಿಸಿದೆ.

23. ಪ್ರಸ್ತುತ ಪ್ರಕರಣದ ಮಹಜರ್ ಸಾಕ್ಷಿದಾರರು ಎನ್ನಲಾದ ಚಾಸಾ.10 ಕೆ.ಸಿ. ಸಿದ್ದಪ್ಪ ರವರನ್ನು ಫ್ರಾಸಾ.1 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಿಪಿ.5 ರಂತೆ ನಿಶಾನೆಗೊಳಗಾದ ವಾಹನ ತಡೆ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯಲ್ಲಿ ಬರೆದ ವಿಚಾರ ತನಗೆ ಗೊತ್ತಿಲ್ಲ, ಅದನ್ನು ಯಾರು, ಎಲ್ಲಿ, ಯಾವ ಕಾರಣಕ್ಕಾಗಿ ಬರೆದರು ಎಂದು ಗೊತ್ತಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

24. ಸದರಿ ಸಾಕ್ಷಿಯನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರನೆಂದು ಪರಿಗಣಿಸಿ ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲಿಗೆ ಒಳಪಡಿಸಿದಾಗ ಅಭಿಯೋಜಕರು ಸೂಚಿಸಿದ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

25. ಇನ್ನು ಪ್ರಸ್ತುತ ಪ್ರಕರಣದ ತನಿಕಾಧಿಕಾರಿಗಳಾದಂತಹ ಚಾಸಾ.19 ವೀರಪ್ಪ ಎಸ್ ಆರ್ ರವರನ್ನು ಅಭಿಯೋಜನೆಯು ಪ್ರಾಸಾ.4 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 05/08/2020 ರಂದು ಬೆಳಗ್ಗೆ 10-45 ರ ಸಮಯಕ್ಕೆ ತಾನು ಠಾಣಾ ಪ್ರಭಾರೆಯಲ್ಲಿದ್ದಾಗ ಚನ್ನಗಿರಿ ಸರ್ಕಾರಿ ಆಸ್ಪತ್ರೆಯಿಂದ ಹೆಚ್ ಎಂ ಆರ್ ವರದಿ ನ್ನು ಸ್ವೀಕರಿಸಿ ಠಾಣೆಗೆ ಭೇಟಿ ನೀಡಿ ಚಾಸಾ.1 ರವರು ಕೊಟ್ಟ ಹೇಳಿಕೆ ದೂರನ್ನು ಸ್ವೀಕರಿಸಿ, ಠಾಣೆಗೆ ಹಿಂದಿರುಗಿ ಠಾಣಾ ಗುನ್ನೆ ಸಂಖ್ಯೆ 276 / 2021 ರಲ್ಲಿ ಕಲಂ 279, 337, 304-A ರೀತ್ಯ ಭಾರತೀಯ ದಂಡ ಸಂಹಿತೆ ಅಡಿ ಪ್ರಕರಣವನ್ನು ದಾಖಲಿಸಿದ್ದು ನಿಪಿ.21 ರಂತೆ ನಿಶಾನೆಗೊಳಗಾದ ಹೇಳಿಕೆ ದೂರಿನಲ್ಲಿನ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಸದರಿ ದೂರಿನ ಆಧಾರದ ಮೇಲೆ ನಿಪಿ.22 ರಂತೆ ನಿಶಾನೆಗೊಳಗಾದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.20 ರವರಿಗೆ ವಹಿಸಿಕೊಟ್ಟಿರುವುದಾಗಿ ತಾನು ಕೈಗೊಂಡ ತನಿಖೆಯ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

26. ಸದರಿ ಸಾಕ್ಷಿದಾರರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ದೂರು ಮತ್ತು ಪ್ರಥಮ ವರ್ತಮಾನ ವರದಿಯ ಮೇಲೆ ಅನುಮಾನ ಉಂಟು ಮಾಡುವಂತಹ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

27. ಪ್ರಸ್ತುತ ಪ್ರಕರಣದ ಮತ್ತೊಬ್ಬ ತನಿಖಾಧಿಕಾರಿಗಳಾದಂತಹ ಚಾಸಾ.20 ಮಧು ಪಿ.ಬಿ ರವರನ್ನು ಅಭಿಯೋಜನೆಯು ಫ್ರಾಸಾ.3 ರಂತೆ ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 05-08-2021 ರಂದು ಚಾಸಾ. 19 ರವರಿಂದ ಕಡತವನ್ನು ಸ್ವೀಕರಿಸಿ, ಪರಿಶೀಲಿಸಿ, ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ನಿಪಿ.1 ರಂತೆ ಒಪ್ಪಿಗೆ ಮೇರೆಗೆ ನಿಶಾನೆಗೊಳಗಾದ ಮೃತ ಸಲೀಂನ ಶವ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಜರುಗಿಸಿರುವುದಾಗಿ, ಸದರಿ ಸಮಯಕ್ಕೆ ನಿಪಿ.7 ರಂತೆ ನಿಶಾನೆಗೊಳಗಾದ ಭಾವಚಿತ್ರವನ್ನು ತೆಗೆದಿರುವುದಾಗಿ, ನಿಪಿ.1 ರ ಸಮಯಕ್ಕೆ ಚಾಸಾ.4 ಮತ್ತು 5 ರವರ ಹೇಳಿಕೆಗಳನ್ನು ಪಡೆದಿರುವುದಾಗಿ ಮತ್ತು ಅಪಘಾತಪಡಿಸಿದ ಟ್ರ್ಯಾಕ್ಟರ್ ನ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಿಸಿರುವುದಾಗಿ ದಿನಾಂಕ 05-08-2021 ರಂದು ನಿಪಿ.8 ರಂತೆ ನಿಶಾನೆಗೊಳಗಾದ ಚಾಸಾ .1ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು, ಚಾಸಾ.1, 5 ಮತ್ತು 6 ರವರ ಸಮಕ್ಷಮ ಜರುಗಿಸಿರುವುದಾಗಿ, ಸದರಿ ಸಮಯಕ್ಕೆ ನಿಪಿ.9 ರಂತೆ ನಿಶಾನೆಗೊಳಗಾದ ಭಾವಚಿತ್ರವನ್ನು ಹಾಗೂ ನಿಪಿ .10 ರಂತೆ ನಿಶಾನೆಗೊಳಗಾದ ಕಚ್ಚಾ ನಕಾಶೆಯನ್ನು ತಯಾರಿಸಿರುವುದಾಗಿ ಮತ್ತು ಸದರಿ ನಿಪಿ.10 ಕ್ಕೆ ಚಾಸಾ.5 ಮತ್ತು 6ರವರ ಸಹಿಯನ್ನು ಪಡೆದು, ನಲ್ಲೂರು ಉಪ

ಪೊಲೀಸ್ ಠಾಣೆಯಲ್ಲಿ ಅಪಘಾತಪಡಿಸಿದ ಟ್ರ್ಯಾಕ್ಟರ್ ಅನ್ನು ಹಾಜರುಪಡಿಸಿದ್ದು, ಅದನ್ನು ಚಾಸಾ.5 ಮತ್ತು 6 ರವರ ಸಮಕ್ಷಮ, ನಿಪಿ.11 ರಂತೆ ಪಂಚನಾಮೆಯನ್ನು ಜರುಗಿಸಿ, ವಾಹನ ತಪಾಸಣಾ ಪರೀಕ್ಷೆಗಾಗಿ ತಡೆಹಿಡಿದಿದ್ದು, ಸದರಿ ಸಮಯಕ್ಕೆ ನಿಪಿ.12 ರಂತೆ ಭಾವಚಿತ್ರವನ್ನು ತೆಗೆದಿದ್ದು, ಅದೇ ದಿನದಂದು ಚಾಸಾ.5 ಮತ್ತು 6 ರವರ ಸಮಕ್ಷಮ ಅಪಘಾತಕ್ಕೊಳಗಾದ ಮೋಟಾರ್ ಬೈಕ್ ಅನ್ನು ತಡೆ ಹಿಡಿದು, ನಿಪಿ.13 ರಂತೆ ನಿಶಾನೆಗೊಳಗಾದ ಪಂಚನಾಮೆಯನ್ನು ಜರುಗಿಸಿರುವುದಾಗಿ, ಸದರಿ ಸಮಯಕ್ಕೆ ನಿಪಿ.14 ರಂತೆ ನಿಶಾನೆಗೊಳಗಾದ ಭಾವಚಿತ್ರವನ್ನು ತೆಗೆದಿದ್ದು ಹಾಗೂ ಚಾಸಾ.14 ರಿಂದ 16 ರವರ ಹೇಳಿಕೆಗಳನ್ನು ಪಡೆದು ಮತ್ತು ಚಾಸಾ.18 ರವರಿಂದ ನಿಪಿ.15 ರಂತೆ ನಿಶಾನೆಗೊಳಗಾದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 –ಬಿ ರ ಅಡಿಯಲ್ಲಿ ಪ್ರಮಾಣಪತ್ರವನ್ನು ಹಾಗೂ ದಿನಾಂಕ 11–08–2021 ರಂದು ಅಪಘಾತ ಉಂಟು ಮಾಡಿದ ಟ್ರ್ಯಾಕ್ಟರಿನ ಆರ್ .ಸಿ ಮಾಲೀಕನಿಗೆ ನಿಪಿ.16 ರಂತೆ ನಿಶಾನೆಗೊಳಿಸಿದ ನೋಟೀಸ್ ಅನ್ನು ಜಾರಿ ಮಾಡಿ, ಆತನಿಂದ ನಿಪಿ.17 ರಂತೆ ನಿಶಾನೆಗೊಳಿಸಿದ ಉತ್ತರವನ್ನು ಪಡೆದಿದ್ದು , ಹಾಗೂ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ವಾಹನ ಮತ್ತು ಚಾಲಕನಿಗೆ ಸಂಬಂಧಿಸಿದ ವಿವರಗಳನ್ನು ಪಡೆದಿರುವುದಾಗಿ ಮತ್ತು ಸದರಿ ಪ್ರಕರಣದಲ್ಲಿ ದಿನಾಂಕ 22/09/2021 ರಂದು ಬೈಕಿನ ಮಾಲೀಕನಾದ 2 ನೇ ಆರೋಪಿಗೆ ನಿಪಿ.18 ರಂತೆ ನೋಟೀಸನ್ನು ಜಾರಿ ಮಾಡಿ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಗೂ ಚಾಲಕನ ಚಾಲನಾ ಪರವಾನಿಗೆಯನ್ನು ಮತ್ತು ಇತರೆ ವಿವರಗಳನ್ನು ಹಾಜರುಪಡಿಸುವಂತೆ ಕೋರಿದ್ದು, 2 ನೇ ಆರೋಪಿ ನಿಪಿ.19 ರಂತೆ

ನಿಶಾನೆಗೊಳಿಸಿದ ಮತ್ತು ಲಗತ್ತು ದಾಖನೆಗಳೊಂದಿಗೆ ಉತ್ತರವನ್ನು ನೀಡಿದ್ದು, ನಿಪಿ.20 ರಂತೆ ನಿಶಾನೆಗೊಳಿಸಿದ ಜಿ. ಪಿ. ಎ ನ್ನು ಮತ್ತು ಇಂಡೆಮ್ನಿಟಿ ಬಾಂಡ್ ಅನ್ನು ಪಡೆದು ಸದರಿ ವಾಹನವನ್ನು ಆತನ ವಶಕ್ಕೆ ಬಿಡುಗಡೆಗೊಳಿಸಿರುವುದಾಗಿ ಮತ್ತು ದಿನಾಂಕ 07-09-2021 ರಂದು 3 ನೇ ಆರೋಪಿಯಿಂದ ವಾಹನ ಬಿಡುಗಡೆ ಆದೇಶವನ್ನು ಚಾಸಾ.9 ಮತ್ತು 10 ರವರ ಸಮಕ್ಷಮ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿ ಬಿಡುಗಡೆಗೊಳಿಸಿರುವುದಾಗಿ ಹಾಗೂ ದಿನಾಂಕ 12-10-2021 ರಂದು ನಿಪಿ.3 ರಂತೆ ನಿಶಾನೆಗೊಳಿಸಿದ ವಾಹನ ತಪಾಸಣಾ ವರದಿಯನ್ನು ಪಡೆದಿದ್ದು , ದಿನಾಂಕ 26-11-2021 ರಂದು, ಚನ್ನಗಿರಿ ತಾಲ್ಲೂಕು ಆಸ್ಪತ್ರೆಯಿಂದ ನಿಪಿ.4 ರಂತೆ ನಿಶಾನೆಗೊಳಗಾದ ಪಿ.ಎಂ. ವರದಿಯನ್ನು ಪಡೆದಿದ್ದು ಮತ್ತು ದಿನಾಂಕ 26-12-2021 ರಂದು ಸದರಿ ಆಸ್ಪತ್ರೆಯಿಂದ ಚಾಸಾ.1 ರವರ ನಿಪಿ.2 ರಂತೆ ನಿಶಾನೆಗೊಳಗಾದ ಗಾಯದ ಪ್ರಮಾಣಪತ್ರವನ್ನು ಪಡೆದು ತನಿಖೆಯನ್ನು ಪೂರೈಸಿ, ಆರೋಪಿತರ ಮೇಲೆ ದೋಷಾರೋಪಣ ಪಟ್ಟಿಯನ್ನು ದಾಖಲಿಸಿರುವುದಾಗಿ, ಅಭಿಯೋಜನೆಯ ಪ್ರಕರಣಕ್ಕೆ ಮತ್ತು ತಾನು ಕೈಗೊಂಡ ತನಿಖೆಯ ಕುರಿತು ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

28. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ತಾನು ಕೈಗೊಂಡ ತನಿಖೆಯ ತನಿಖಾ ಕ್ರಮದ ಮೇಲೆ ಸಂಶಯ ಮೂಡುವಂತಹ ಎಲ್ಲಾ ಸೂಚನೆಗಳನ್ನು ಸಾಕ್ಷಿ ಅಲ್ಲಗಳೆದಿರುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ಲಭ್ಯವಿರುವ ದೂರುದಾರರ ಹಾಗೂ ಪ್ರತ್ಯಕ್ಷದರ್ಶಿ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಸದರಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಮತ್ತು ತಾವು ನೀಡಿದ ದೂರು ಮತ್ತು ಹೇಳಿಕೆಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುತ್ತಾರೆ.

29. ಹಾಗಾಗಿ 1 ನೇ ಆರೋಪಿಯ ಮೇಲೆ ಆರೋಪಿಸಿದ ಆರೋಪಗಳಾದ ಭಾರತೀಯ ದಂಡ ಸಂಹಿತೆ ಕಲಂ 279, 337, 304-A ಅಡಿಯಲ್ಲಿನ ಆಪಾದನೆಗಳನ್ನು ಸಂದೇಹಾತೀತವಾಗಿ ರುಜುವಾತುಪಡಿಸಲು ಪ್ರತ್ಯಕ್ಷದರ್ಶಿ ಹಾಗೂ ಸಮರ್ಥ ಸಾಕ್ಷಿದಾರರ ಕೊರತೆಯಿಂದ ಅಭಿಯೋಜನೆಯು ವಿಫಲವಾಗಿರುತ್ತದೆ. ಅಲ್ಲದೆ, ಪ್ರಸ್ತುತ ಪ್ರಕರಣದಲ್ಲಿ ಸದರಿ ಅಪಘಾತದಲ್ಲಿ ಸಲೀಂ ಎಂಬಾತನು ಮೃತಪಟ್ಟಿರುವ ಅಂಶ ಒಪ್ಪಿಗೆಯ ಆಧಾರದ ಮೇಲೆ ನಿಶಾನೆಗೊಳಗಾದ ಶವ ಪರೀಕ್ಷಾ ವರದಿ ಮತ್ತು ಶವ ತನಿಖಾ ವರದಿಗಳಿಂದ ರುಜುವಾತಾಗಿದ್ದರೂ ಸಹ, ಸದರಿ ಅಪಘಾತಕ್ಕೆ 1 ನೇ ಆರೋಪಿ ತನ್ನ ಟ್ರ್ಯಾಕ್ಟರ್ ಅನ್ನು ತನ್ನ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆಯಿಂದ ಸಾರ್ವಜನಿಕ ರಸ್ತೆಯಲ್ಲಿ ಚಲಾಯಿಸಿದ್ದೆ ಕಾರಣ ಎಂಬ ಅಂಶ ಸದರಿ ಒಪ್ಪಿತ ದಾಖಲೆಗಳಿಂದ ರುಜುವಾತಾಗದೆ ಉಳಿಯುತ್ತದೆ. ಆದರೆ, ಸದರಿ ಅಪಘಾತದಲ್ಲಿ ಸಲೀಂ ಎಂಬಾತ ಮೃತಪಟ್ಟಿರುವುದು ಸ್ಪಷ್ಟವಾಗಿದ್ದು, ಸದರಿ ಅಪಘಾತ ಬೈಕ್ ಮತ್ತು ಟ್ರ್ಯಾಕ್ಟರ್, ಟ್ರೈಲರ್ ನಡುವೆ ಆಗಿರುವ ಅಂಶ ದೂರುದಾರರ ಮತ್ತು ತನಿಖಾಧಿಕಾರಿಗಳ ಸಾಕ್ಷ್ಯದಿಂದ ಮತ್ತು ನಿಪಿ.3 ರಂತೆ ನಿಶಾನೆಗೊಳಗಾದ ವಾಹನ ತಪಾಸಣಾ ವರದಿಯಿಂದ ಸ್ಪಷ್ಟಗೊಳ್ಳುತ್ತದೆ.

30. ಪ್ರಸ್ತುತ ಪ್ರಕರಣದಲ್ಲಿ ನಮೂದಿಸಿದ ವಾಹನಗಳ ಸಂಖ್ಯೆಗಳನ್ನೇ ನಮೂದಿಸಿರುವುದು ಕಂಡುಬಂದಿದ್ದು, ಸದರಿ ವಾಹನಗಳು ಜಖಂ ಗೊಂಡಿರುವ ಅಂಶವು ಸಹ ಸ್ಪಷ್ಟಗೊಳ್ಳುತ್ತದೆ ಮತ್ತು ಸದರಿ ಅಪಘಾತ ಸದರಿ ವಾಹನಗಳ ಯಾವುದೇ ಯಾಂತ್ರಿಕ ದೋಷದಿಂದ ಉಂಟಾಗಿಲ್ಲ ಎಂಬ ಅಂಶವು ಸಹ ನಿಪಿ.3 ರಿಂದ ಹೊರಹೊಮ್ಮುತ್ತದೆ. ಹಾಗಾಗಿ ತನಿಕಾಧಿಕಾರಿಗಳ ಸಾಕ್ಷ್ಯದಿಂದ ಹಾಗೂ 2 ಮತ್ತು 3 ನೇ ಆರೋಪಿತರು ತಮ್ಮ ಮೇಲಿನ ಆಪಾದನೆಗಳನ್ನು ತಪ್ಪೊಪ್ಪಿಕೊಂಡಿರುವ ಕಾರಣ, 1 ನೇ ಆರೋಪಿಯ ಮೇಲೆ ಆರೋಪಿಸಿದ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ. 187 ರ ಅಡಿಯಲ್ಲಿನ ಆರೋಪವು ಸಾಬೀತಾಗುತ್ತದೆ. ಸದರಿ ಅಪಘಾತವು ಯಾರ ತಪ್ಪಿನಿಂದ ಉಂಟಾಗಿದೆ ಎಂಬ ಅಂಶವನ್ನು ಅಭಿಯೋಜನೆಯು ರುಜುವಾತು ಪಡಿಸದೆ ಇದ್ದರೂ ಸಹ, ಸದರಿ ಅಪಘಾತದಲ್ಲಿ ಸದರಿ ಟ್ರ್ಯಾಕ್ಟರ್ ಟ್ರೈಲರ್ ನ್ನು 1 ನೇ ಆರೋಪಿ ಚಲಾಯಿಸುತ್ತಿದ್ದು ಸದರಿ ಅಪಘಾತವಾದ ಸಮಯಕ್ಕೆ ಸದರಿ ವಾಹನವನ್ನು ಅಲ್ಲಿಯೇ ನಿಲ್ಲಿಸಿ, ಓಡಿ ಹೋಗಿರುವುದು ಅಲ್ಲದೆ, 1 ನೇ ಆರೋಪಿ ಸದರಿ ಅಪಘಾತದ ಕುರಿತು ಠಾಣೆಗೆ ಯಾವುದೇ ಮಾಹಿತಿಯನ್ನು ನೀಡದೆ ಇರುವುದು ಸ್ಪಷ್ಟಗೊಳ್ಳುತ್ತದೆ. ಹಾಗಾಗಿ, 1 ನೇ ಆರೋಪಿಯ ಮೇಲೆ ಆರೋಪಿಸಿದ ಆಪಾದನೆಯಾದ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯಲ್ಲಿನ ಆಪಾದನೆಯನ್ನು ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲಿನಲ್ಲಿ ನಿರ್ದಿಷ್ಟವಾಗಿ ಅಲ್ಲಗಳೆದಿಲ್ಲ. ಸದರಿ ಅಪಘಾತದಲ್ಲಿ ಸದರಿ ವಾಹನ ಟ್ರ್ಯಾಕ್ಟರ್ ಟ್ರೈಲರ್ ನ ಪಾತ್ರ ಇಲ್ಲದೆ ಇದ್ದಿದ್ದರೆ, ಸದರಿ ವಾಹನವನ್ನು 1 ನೇ ಆರೋಪಿ ಇಂಡೆಮ್ನಿಟಿ ಬಾಂಡ್

ನ್ನು ಹಾಜರುಪಡಿಸಿ ಬಿಡುಗಡೆಗೊಳಿಸಿಕೊಳ್ಳುವ ಪ್ರಮೇಯವಿರುತ್ತಿರಲಿಲ್ಲ. ಹಾಗಾಗಿ 1 ನೇ ಆರೋಪಿಯ ಮೇಲೆ ಆರೋಪಿಸಿದ ಸದರಿ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ಸಫಲವಾಗಿದೆ. ಹಾಗಾಗಿ ಸದರಿ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಆಪಾದನೆಯ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ. ಹಾಗಾಗಿ ಈ **ನ್ಯಾಯಾಲಯ ಸದರಿ 1 ರಿಂದ 3 ನೇ ಅಂಶಗಳನ್ನು ನಕಾರಾತ್ಮಕವಾಗಿ** ಹಾಗೂ **ಅಂಶ ಸಂಖ್ಯೆ 4 ನ್ನು ಮೇಲ್ಕಂಡ ಕಾರಣಗಳಿಂದ ಸಕಾರಾತ್ಮಕವಾಗಿ** ಉತ್ತರಿಸುತ್ತದೆ.

**31. ಅಂಶ ಸಂಖ್ಯೆ 5:-** ಅಂಶ ಸಂಖ್ಯೆ 1 ರಿಂದ 4 ರಲ್ಲಿ ತಿಳಿಸಿರುವ ಕಾರಣಗಳಿಂದಾಗಿ ಈ ಕೆಳಗಿನ ಅಂತಿಮ ಆದೇಶ ಮಾಡಲಾಗಿದೆ.

## ಆದೇಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1 ನೇ ಆರೋಪಿಯ ವಿರುದ್ಧ ಆರೋಪಿಸಿದ ಭಾರತೀಯ ದಂಡ ಸಂಹಿತೆ ಕಲಂ.279, 337, 304-ಎ ಅಡಿಯ ಆಪಾದನೆಗಳಿಂದ 1 ನೇ ಆರೋಪಿಯನ್ನು ನಿರ್ದೋಷಿಯೆಂದು ತೀರ್ಮಾನಿಸಿದೆ.**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ 1 ನೇ ಆರೋಪಿಯ**

ವಿರುದ್ಧ ಆರೋಪಿಸಿದ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ. 187 ರ ಅಡಿಯ ಆಪಾದನೆಗೆ ಸಿದ್ಧ ದೋಷಿ ಎಂದು ತೀರ್ಮಾನಿಸಿದೆ.

ಶಿಕ್ಷೆಯ ಕುರಿತು ಆರೋಪಿತರ ವಿಚಾರಣೆಗಾಗಿ ಮಧ್ಯಾಹ್ನ 01.00 ಗಂಟೆಗೆ ಕಾಯ್ದಿರಿಸಲಾಯಿತು.

(ಶ್ರೀಮತಿ. ಮಹಾಲಕ್ಷ್ಮೀ. ಜೆ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,
ಚನ್ನಗಿರಿ.

ಶಿಕ್ಷೆಯ ಮೇಲಿನ ವಾದ – ವಿವಾದವನ್ನು ಕೇಳಲಾಯಿತು. ನಂತರ ಈ ನ್ಯಾಯಾಲಯ ಕೆಳಕಂಡಂತೆ ಆದೇಶಿಸುತ್ತದೆ.

1 ನೇ ಆರೋಪಿಯ ಮೇಲೆ ಆಪಾದಿಸಿದ ಭಾರತೀಯ ಮೋಟಾರ್ ವಾಹನ ಕಾಯ್ದೆ ಕಲಂ 187 ರ ಅಡಿಯ ಅಪರಾಧಕ್ಕಾಗಿ ಆರು ತಿಂಗಳ ಕಾರವಾಸ ಅಥವಾ 5,000/– ರೂಪಾಯಿಗಳ ದಂಡ ಅಥವಾ ಎರಡನ್ನೂ ವಿಧಿಸುವ ಅಧಿಕಾರವಿರುತ್ತದೆ.

ಈ ನ್ಯಾಯಾಲಯ ತನ್ನ ವಿವೇಚನಾಧಿಕಾರವನ್ನು ಚಲಾಯಿಸುತ್ತಾ 1 ನೇ ಆರೋಪಿಗೆ ಸದರಿ ಕಲಂ ನ ಅಡಿಯ

**ಅಪರಾಧಕ್ಕಾಗಿ 5,000/- ರೂಪಾಯಿಗಳ ದಂಡವನ್ನು ವಿಧಿಸುತ್ತದೆ. ಸದರಿ ದಂಡವನ್ನು ಪಾವತಿಸಲು ತಪ್ಪಿದಲ್ಲಿ ಮೂವತ್ತು ದಿನಗಳ ಕಾಲ ಸಾದಾ ಕಾರಾವಾಸದ ಶಿಕ್ಷೆಯನ್ನು ಅನುಭವಿಸತಕ್ಕದ್ದು .**

**1 ನೇ ಆರೋಪಿ ಮತ್ತು ಜಾಮೀನುದಾರನ ಮುಚ್ಚಳಿಕೆಗಳನ್ನು ಮೇಲ್ಮನವಿ ಅವಧಿಯ ತರುವಾಯ ರದ್ದು ಪಡಿಸುವಂತೆ ಆದೇಶಿಸಲಾಗಿದೆ.**

**ಈ ಮೂಲಕ 1 ನೇ ಆರೋಪಿಗೆ ತೀರ್ಪಿನ ನಕಲು ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಛೇರಿಗೆ ಆದೇಶಿಸಿದೆ.**

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಉಖ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 2 ನೇ ಮೇ 2026 ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಛರಿಸಲ್ಪಟ್ಟಿತ್ತು)

**(ಶ್ರೀಮತಿ. ಮಹಾಲಕ್ಷ್ಮೀ. ಜಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**

**ಅನುಬಂಧ:**

1. **ಅಭಿಯೋಜನೆಯ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರಃ**

ಪಿಡಬ್ಲೂ-1 : ಸಿದ್ದಪ್ಪ

ಪಿಡಬ್ಲೂ-2 : ಸೈಯದ್ ಮುಸ್ತಫಾ

ಪಿಡಬ್ಲೂ-3 : ಮಧು ಪಿ ಬಿ

ಪಿಡಬ್ಲೂ-4 : ವೀರಪ್ಪ ಎಸ್ ಆರ್

ಪಿಡಬ್ಲೂ-5 : ಇರ್ಫಾನ್ ಖಾನ್,

ಪಿಡಬ್ಲೂ-6 : ಸಲ್ಮಾನ್ ಖಾನ್

ಪಿಡಬ್ಲೂ-7 : ಮೊಹಮ್ಮದ್ ಗೌಸ್

## 2. ಅಭಿಯೋಜನೆಯ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರಃ

ನಿಪಿ.1: ಶವ ತನಿಖಾ ವರದಿ,

ನಿಪಿ.1(ಎ): ಸಹಿ,

ನಿಪಿ.2: ಗಾಯದ ಪ್ರಮಾಣ ಪತ್ರ,

ನಿಪಿ.2(ಎ): ಸಹಿ,

ನಿಪಿ.3: ಐ ಎಂ ವಿ ವರದಿ,

ನಿಪಿ.3(ಎ): ಸಹಿ,

ನಿಪಿ.4: ಶವ ಪರೀಕ್ಷಾ ವರದಿ,

ನಿಪಿ.4(ಎ)ಮತ್ತು (ಬಿ): ಸಹಿಗಳು,

ನಿಪಿ.5: ವಾಹನ ಬಿಡುಗಡೆ ಪಂಚನಾಮೆ,

ನಿಪಿ.5(ಎ) ಮತ್ತು (ಬಿ): ಸಹಿಗಳು,

ನಿಪಿ.6: ಚಾಸಾ-14 ರವರ ಹೇಳಿಕೆ,

ನಿಪಿ.7, 9, 12 ಮತ್ತು 14: ಭಾವಚಿತ್ರಗಳು,

ನಿಪಿ.8: ಕೃತ್ಯ ನಡೆದ ಸ್ಥಳದ ಪಂಚನಾಮೆ,

ನಿಪಿ.10: ಕೃತ್ಯ ನಡೆದ ಸ್ಥಳದ ಕಚ್ಚಾ ನಕಾಶೆ,

ನಿಪಿ.10(ಎ) : ಸಹಿ,

ನಿಪಿ.11: ಟ್ರಾಕ್ಟರ್ ಮತ್ತು ಟ್ರೇಲರ್ ಅಮಾನತ್ತು ಪಂಚನಾಮೆ,

ನಿಪಿ.11(ಎ) : ಸಹಿ,

ನಿಪಿ.13: ಬೈಕಿನ ಅಮಾನತ್ತು ಪಂಚನಾಮೆ,

ನಿಪಿ.13(ಎ) : ಸಹಿ,

ನಿಪಿ.15: ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65-ಬಿ ಅಡಿ ಪ್ರಮಾಣ ಪತ್ರ,

ನಿಪಿ.15(ಎ): ಸಹಿ,

ನಿಪಿ.16: ವಾಹನದ ಮಾಲೀಕರಿಗೆ ನೀಡಿದ ನೋಟೀಸು,

ನಿಪಿ.16(ಎ): ಸಹಿ,

ನಿಪಿ.17 ಮತ್ತು 18: ನೋಟೀಸಿಗೆ ನೀಡಿದ ಉತ್ತರಗಳು,

ನಿಪಿ.17(ಎ) ಮತ್ತು 18(ಎ): ಸಹಿಗಳು,

ನಿಪಿ.19: ಜಿ ಪಿ ಎ,

ನಿಪಿ.20: ಇಂಡೆಮ್ನಿಟಿ ಬಾಂಡ್,

ನಿಪಿ.20(ಎ): ಸಹಿ,

ನಿಪಿ.21: ದೂರು,

ನಿಪಿ.21(ಎ): ಸಹಿ,

ನಿಪಿ.22: ಪ್ರ.ವ.ವರದಿ,

ನಿಪಿ.22(ಎ): ಸಹಿ

ನಿಪಿ.23 ಮತ್ತು 24 : ಚಾಸಾ 15 ಮತ್ತು 16 ರವರ ಅಲ್ಲಗಳೆದ ಹೇಳಿಕೆಗಳು

3. **ಆರೋಪಿ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರಃ**

ಇಲ್ಲ

4. **ಆರೋಪಿ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರಃ**

ಇಲ್ಲ

5. **ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರಃ**

**ಇಲ್ಲ**

**(ಶ್ರೀಮತಿ. ಮಹಾಲಕ್ಷ್ಮೀ. ಜಿ)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳು,**
**ಚನ್ನಗಿರಿ.**